# 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು.

Spl.C.29/2021

C.W.11
P.W. 10

ದಿನಾಂಕಃ 03-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಹೆಸರು | ಃ ನರಸಿಂಹಮೂರ್ತಿ |
| ತಂದೆಯ ಹೆಸರು | ಃ ಕೃಷ್ಣಪ್ಪ |
| ವಯಸ್ಸು | ಃ 50 ವರ್ಷ |
| ಉದ್ಯೋಗ | ಃ ಗಾರೆಕೆಲಸ |
| ವಾಸ | ಃ ದೊಡ್ಡಸಾರಂಗಿ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಮೃತ ಅಂಜಲಿ ನನ್ನ ಅತ್ತೆಯ ಮಗಳು. ದೊಡ್ಡಸಾರಂಗಿ ಆಕೆಯ ತಾಯಿಯ ಮನೆ . ತುಮಕೂರಿನ ಜಿಲ್ಲಾ ಆಸ್ಪತ್ರೆಗೆ ಪೊಲೀಸರು ಹೇಳಿ ಕರೆಸಿದ ಮೇರೆಗೆ ನಾನು ಬಂದಿರುತ್ತೇನೆ. ಅಂಜಲಿ ಶವವನ್ನು ಶವಗಾರದಲ್ಲಿ ಇಟ್ಟಿರುತ್ತಾರೆಂದು ಪೊಲೀಸರಿಗೆ ತಿಳಿಸಿರುತ್ತಾರೆ. ಪೊಲೀಸರು ನನ್ನ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ .

( ಈ ಸಾಕ್ಷಿಯು ಈಃ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು

ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೇಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ-</u>

ಅಂಜಲಿ ತಾಯಿಯ ಹೆಸರು ನಾಗಮ್ಮ. ಪೊಲೀಸರು ಅಂಜಲಿಯ ಪೋಟೋವನ್ನು ದೊಡ್ಡಸಾರಂಗಿಗೆ ತೆಗೆದುಕೊಂಡು ಬಂದಿದ್ದರು ಅಂದರೆ ನನಗೆ ಗೊತ್ತಿಲ್ಲ . ಸದರಿ ಪೋಟೋವನ್ನು ನೋಡಿ ಆ ಪೋಟೋ ಮೃತ ಅಂಜಲಿಯ ಪೋಟೋವೆಂದು ಗುರುತಿಸಿರುತ್ತೇನೆ ಅಂದರೆ ಸರಿಯಲ್ಲ . ಆ ಸಮಯದಲ್ಲಿ ಪೊಲೀಸರು ಅಂಜಲಿಯ ಕೊಲೆಯಾಗಿರುತ್ತದೆ ಮೃತ ದೇಹವನ್ನು ತುಮಕೂರಿನ ಜಿಲ್ಲಾ ಶವಗಾರದಲ್ಲಿ ಇಟ್ಟಿರುತ್ತೇವೆಂದು ಬಂದು ನೋಡಬೇಕಾಗಿ ಹೇಳಿದರು ಅಂದರೆ ಸರಿ. ನಾನು ಬಂದು ನೋಡಿದಾಗ ಶವವು ತಲೆಯಿಂದ ಸೊಂಟದವರಿಗೆ ಕೊಳೆತು ಕೆಟ್ಟ ರಕ್ತ ಹೊರಬಂದು ದುರ್ವಾಸನೆ ಬರುತ್ತಿತ್ತು ಅಂದರೆ ನನಗೆ ಗೊತ್ತಿಲ್ಲ. ಮೃತ ಅಂಜಲಿಯು ತುಮಕೂರಿನಲ್ಲಿ ಉದಯ್ ಕುಮಾರ್ ಎನ್ನುವವರ ಮನೆಯಲ್ಲಿ ಬಾಡಿಗೆಗೆ ವಾಸವಾಗಿದ್ದಳು ಅಂದರೆ ನನಗೆ ಗೊತ್ತಿಲ್ಲ. ನನಗೆ ಪೊಲೀಸರು ಯಾರೋ ಅಪರಿಚಿತ ದುಷ್ಕರ್ಮಿಗಳು ಅಂಜಲಿ ವಾಸವಿದ್ದ ಮನೆಗೆ ಪ್ರವೇಶ ಮಾಡಿ ಯಾವುದೋ ಕಾರಣಕ್ಕಾಗಿ ಯಾವುದೋ ಆಯುಧದಿಂದ

ಆಕೆಯ ಕಾಲುಗಳನ್ನು ಸೀರೆಯಿಂದ ಕಟ್ಟಿಕೊಲೆ ಮಾಡಿರುತ್ತಾರೆಂದು ತಿಳಿಸಿರುತ್ತಾರೆ ಅಂದರೆ ಸರಿಯಲ್ಲ . ನಂತರ ಈ ವಿಚಾರವನ್ನು ತಿಳಿದುಕೊಂಡು ಸದರಿ ವ್ಯಕ್ತಿಗಳನ್ನು ಪತ್ತೆ ಮಾಡಿ ಅವರ ವಿರುದ್ದ ಸೂಕ್ತ ಕಾನೂನುಕ್ರಮ ಕೈಗೊಳ್ಳಲು ಕೋರಿರುತ್ತೇನೆ ಅಂದರೆ ಸರಿಯಲ್ಲ . ಈಗ ಓದಿ ಹೇಳಿದಂತೆ ನಾಗಮ್ಮನ ಮಗಳಾದ .... ಕೋರುತ್ತೇನೆ ಎಂಬ ಹೇಳಿಕೆಯ ಭಾಗವನ್ನು ನಿಪಿ-18(b) ರಂತೆ ಹೇಳಿಕೆ ನೀಡಿರುತ್ತೇನೆ ಅಂದರೆ ಸರಿಯಲ್ಲ . ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ</u> ಇಲ್ಲ-

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇ ಸ ಇದೆ ಎಂದು ಒಪ್ಪಿದ್ದಾರೆ.

**3** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು